ಬರಬೇಕಾದರೆ ಕಾರಣಕರ್ತರೇ ನಾವು. ಅದು ಏನೇ ಇರಲಿ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಏನು ಹೇಳಿದ್ದಾರೆ ಇದನ್ನು ಸ್ಪಷ್ಟವಾಗಿ ಅಲ್ಲಗಳೆಯುತ್ತಿದ್ದೇನೆ. ದಯವಿಟ್ಟು ಈ ರೀತಿಯಲ್ಲಿ ಚೀಪ್ ಪಬ್ಲಿಸಿಟಿಗೋಸ್ಕರ ಇವರು ಪ್ರಯತ್ನ ಮಾಡಬಾರದು ಅವರು ಏನು ಒಂದು ರಾಜಕೀಯ ಪಕ್ಷದ ಅತ್ಯಂತ ಗೌರವಾನ್ವಿತ ಮುಖಂಡರಾಗಿದ್ದಾರೆ ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದು ಸೂಕ್ತ. ಈಗ ಪ್ರಿಸಿಡೆಂಟ್ ಇದೆ. ಮಾನ್ಯ ಚಂದ್ರೇಗೌಡರು ಅಲ್ಲಿ ಕುಳಿತಿರುವ ಸಂದರ್ಭದಲ್ಲಿ ಇವರು ಅರಬೆರಕೆ ಇದ್ದರು ತಮ್ಮ ಕೆಲಸ ಆಗಬೇಕಾದರೆ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದರು. ಕೆಲಸಗಳು ಆಗದೇ ಇದ್ದಾಗ ವಿರೋಧ ಪಕ್ಷ ಎಂದು ಹೇಳಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲೂ ಸಹಿತ ಬಿ.ಜೆ.ಪಿ. ಅವರು ಸುಮ್ಮನೆ ಕುಳಿತುಕೊಂಡಿದ್ದರು. ಪ್ರಶ್ನೋತ್ತರಕ್ಕೆ ಅವಕಾಶವಿದೆ, ಇದು ಸದಸ್ಯರ ಹಕ್ಕಿನ ಪ್ರಶ್ನೆ. ಮಾನ್ಯ ಅಧ್ಯಕ್ಷರೇ, ನನ್ನ ವೈಯುಕ್ತಿಕ ಅಭಿಪ್ರಾಯದಲ್ಲಿ ಯಾವುದೇ ಸಂದರ್ಭದಲ್ಲೂ ಪ್ರಶ್ನೋತ್ತರಕ್ಕೆ ಅವಕಾಶ ಸಿಗಬೇಕು. ಈಗ ಇಲ್ಲಿ ಇರುವ 224 ಜನ ಸದಸ್ಯರಲ್ಲಿ ಪ್ರತಿಯೊಬ್ಬರೂ ಪ್ರತಿದಿನ ಪ್ರಶ್ನೆ ಕೇಳಲು ಸಾಧ್ಯವಿಲ್ಲ. ನಮ್ಮ ಕ್ಷೇತ್ರದಲ್ಲಿ ನಾವು ಯಾವ ವರ್ಗದ ಜನರನ್ನು ಪ್ರತಿನಿಧಿಸುತ್ತೇವೆ ಅವರು ನಮ್ಮಿಂದ ಏನು ನಿರೀಕ್ಷೆ ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು. ನಾವು ಸುಮ್ಮನಿದ್ದರೆ, ಏನು ಇವರು ಮಾತನಾಡಲೇ ಇಲ್ಲ ಎಂದು ಹೇಳುತ್ತಾರೆ.

ಕಷ್ಟಪಟ್ಟುಕೊಂಡು ಲಾಟರಿಯಲ್ಲಿ ಒಂದು ಪ್ರಶ್ನೆ ಬಂದಿರುತ್ತದೆ. ಅದಕ್ಕೂ ಸಹಿತ ಇವರು ನಾಲ್ಕು ಜನ ಸೇರಿಕೊಂಡು ಪ್ರಶ್ನೋತ್ತರ ಬೇಡ ಅಂದರೆ ಹೇಗೆ ಆಗುತ್ತದೆ. ಸದನದ ಒಟ್ಟಾರೆ ಅಭಿಪ್ರಾಯ ತೆಗೆದುಕೊಂಡು ತಾವು ದಯವಿಟ್ಟು ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಪ್ರಶ್ನೋತ್ತರಗಳು : –

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು : –

ಅಧ್ಯಕ್ಷರು : – ಪ್ರಶ್ನೆ ಸಂಖ್ಯೆ 410,638,595 ಈ ಮೂರು ಪ್ರಶ್ನೆಗಳು ಒಂದೇ ವಿಷಯಕ್ಕೆ ಸಂಬಂಧಿಸಿರುವುದರಿಂದ ಎಲ್ಲವನ್ನೂ ಒಂದೇ ಸಾರಿ ತೆಗೆದುಕೊಳ್ಳುತ್ತಿದ್ದೇನೆ.

ದ.ಅ. ವಿಷಯ : – ರಾಸಾಯನಿಕ ಗೊಬ್ಬರಕ್ಕೆ ಸಹಾಯ ಧನ ನೀಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 121 : (410)

ಶ್ರೀ ಡಿ.ಬಿ.ಚಂದ್ರೇಗೌಡ(ತೀರ್ಥಹಳ್ಳಿ) : – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ರಾಜ್ಯ ಸರ್ಕಾರ ರಾಸಾಯನಿಕ ಗೊಬ್ಬರಕ್ಕೆ ಅನುದಾನ ನೀಡುವ ಯೋಜನೆ ಇದೆಯೇ? ಹಾಗಿದ್ದಲ್ಲಿ ಅನುದಾನದ ಪ್ರಮಾಣವೆಷ್ಟು?

2. ಈ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆಯೇ? ಹಾಗಿದ್ದಲ್ಲಿ ಇದು ಯಾವ್ಯಾವ ರೈತರಿಗೆ ಅನ್ವಯವಾಗುವುದು ಯಾವ ವಿಧವಾದ ಗೊಬ್ಬರಗಳಿಗೆ ಎಷ್ಟೆಷ್ಟು ಅನುದಾನವನ್ನು ನೀಡಲು ನಿಗದಿಪಡಿಸಲಾಗಿದೆ.

3. ಈ ನಿಗದಿತ ಪ್ರಮಾಣ ರೈತರಿಗೆ ಬರಲು ಸರ್ಕಾರದವರು ಮಾಡಿರುವ ವ್ಯವಸ್ಥೆ ಏನು?

4. ಈಗಾಗಲೇ ಮುಂಗಾರಿನಲ್ಲಿ ರೈತರು ಬಳಕೆ ಮಾಡಿದ ಬಗ್ಗೆ ಇಂತಹ ಅನುದಾನ ಪಡೆದ

ಮತ್ತು ಅನುದಾನ ಪಡೆಯದ ರೈತರು ಒಟ್ಟು ಉಪಯೋಗಿಸಿದ ರಸಗೊಬ್ಬರಗಳ ಬಗ್ಗೆ ವಿವರವನ್ನು ನೀಡುವುದು

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) : -

ಇದೆ. 1993-94ನೇ ಸಾಲಿನಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರ ನೆರವು ಯೋಜನೆಯಲ್ಲಿ 27.90 ಕೋಟಿ ರೂ.ಗಳು ಮತ್ತು ಎಲ್ಲಾ ವರ್ಗದ ರೈತರಿಗೂ ಅನ್ವಯವಾಗುವ ಕರ್ನಾಟಕ ರಸಗೊಬ್ಬರ ಬೆಲೆ ರಿಯಾಯಿತಿ ಯೋಜನೆ (ಮುಂಗಾರು)ಗೆ 41.723 ಕೋಟಿ ರೂ.ಗಳ ಒಟ್ಟು 69.623 ಕೋಟಿ ರೂ.ಗಳ ಸಹಾಯಧನದ ಅನುದಾನವಿರುತ್ತದೆ.

ಅನುದಾನ ಬಿಡುಗಡೆ ಆಗಿದೆ .1993-94ರಲ್ಲಿ 9.00 ಕೋಟಿ ರೂ.ಗಳನ್ನು ಸಣ್ಣ ಮತ್ತುಅತಿ ಸಣ್ಣ ರೈತರಿಗೆ ವಿಶೇಷ ನೆರವು ಯೋಜನೆಗೂ ಮತ್ತು 10.43 ಕೋಟಿ ರೂ.ಗಳನ್ನು ಎಲ್ಲಾ ವರ್ಗದ ರೈತರಿಗೂ ಅನ್ವಯವಾಗುವ ಕರ್ನಾಟಕ ರಸಗೊಬ್ಬರ ರಿಯಾಯಿತಿ ಬೆಲೆ ಯೋಜನೆ 1993(ಮುಂಗಾರುಕ್ಕೆ) 'ಡುಗಡೆ ಮಾಡಲಾಗಿದೆ. ಇದಲ್ಲದೆ ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಯಡಿಯಲ್ಲಿ 92-93ರ ಅಂತ್ಯದಲ್ಲಿ 12.229 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ಹೀಗಾಗಿ ಈ ಯೋಜನೆಗೆ ಈವರೆಗೆ ಒಟ್ಟು 21.229 ಕೋಟಿ ರೂಗಳನ್ನು ಬಿಡುಗಡೆ ಮಾಡಿದಂತಾಗಿದೆ. ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಯಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮಾತ್ರ ಅನ್ವಯಿಸುವಂತೆ ಅನಿಯಂತ್ರಣದಲ್ಲಿರುವ ರಂಜಕ ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳಿಗೆ ಪ್ರತಿ ಟನ್ನಿಗೆ 1500 ರೂ.ಗಳ ರಿಯಾಯಿತಿ ನೀಡಲಾಗುವುದು (50 ಕೆ.ಜಿ.ಗೊಬ್ಬರ ಚೀಲಕ್ಕೆ 75 ರೂ.ಗಳು)

ಕರ್ನಾಟಕ ರಸಗೊಬ್ಬರ ಬೆಲೆ ರಿಯಾಯಿತಿ ಯೋಜನೆ (ಮುಂಗಾರು) 93ರಲ್ಲಿ ಪ್ರತಿ ಟನ್ ಡಿಎಸಿ ಮತ್ತು ಮ್ಯೂರೇಟ್ ಆಫ್ ಪೊಟ್ಯಾಷ್ ರಸಗೊಬ್ಬರಗಳಿಗೆ 1000 ರೂ. ಗಳು ಪ್ರತಿ ಟನ್ ಸೂಪರ್ ಫಾಸ್ಫೇಟಿಗೆ 340 ರೂ.ಗಳು ಮತ್ತು ಫ್ಲಾಕ್ಟಂಫಾಸ್ ರಸಗೊಬ್ಬರಗಳಿಗೆ ಅವುಗಳಲ್ಲಿರುವ ರಂಜಕ ಮತ್ತು ಪೊಟ್ಯಾಷ್ ಅಂಶಗಳನ್ನು ಅನುಸರಿಸಿ 435 ರೂ.ಗಳಿಂದ 999 ರೂ.ಗಳವರೆಗೆ ರಿಯಾಯಿತಿ ನೀಡಲಾಗುತ್ತಿದೆ. ಈ ಯೋಜನೆಯು ಎಲ್ಲಾ ವರ್ಗದ ರೈತರಿಗೆ ಅನ್ವಯಿಸುತ್ತದೆ.

ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಯಲ್ಲಿ ರಸಗೊಬ್ಬರಗಳನ್ನು ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾ ಮಂಡಳಿಗಳ ಮಾರಾಟ ಕೇಂದ್ರಗಳ ಮೂಲಕ ಮಾತ್ರ ರೈತರಿಗೆ ವಿತರಿಸಲಾಗುತ್ತಿದೆ. ಈ ಯೋಜನೆಯಲ್ಲಿ ರೈತರಿಗೆ ನೀಡುವ ಕೃಷಿ ಸಾಮಗ್ರಿಗಳ ಪಾಸ್ ಪುಸ್ತಕದಲ್ಲಿ ರೈತರು ಪಡೆದ ರಸಗೊಬ್ಬರಗಳ ಪ್ರಮಾಣ, ಅದರ ಪೂರ್ಣ ಬೆಲೆ, ನೀಡಿದ ಸಹಾಯಧನ ಮತ್ತು ನಿವ್ವಳ ಬೆಲೆ ಇವುಗಳನ್ನು ನಮೂದಿಸಿ ರೈತರಿಗೆ ಹಿಂದಿರುಗಿಸಲಾಗುತ್ತಿದೆ. ಕರ್ನಾಟಕ ರಸಗೊಬ್ಬರ ರಿಯಾಯಿತಿ ಬೆಲೆ ಯೋಜನೆಯಲ್ಲಿ ರಾಜ್ಯ ಮಟ್ಟದಲ್ಲೇ ತಯಾರಕರುಗಳಿಗೆ ರಿಯಾಯಿತಿ ಹಣವನ್ನು ನೀಡಿ ರಿಯಾಯಿತಿ ದರದಲ್ಲಿ ಸದರಿ ರಸಗೊಬ್ಬರಗಳನ್ನು ಎಲ್ಲಾ ವರ್ಗದ ರೈತರಿಗೂ ಮಾರಾಟ ಮಾಡಲಾಗುತ್ತಿದೆ. ಈ ಯೋಜನೆಯ ಮೂಲಕ ಮಾರಾಟ ಮಾಡಲಾಗುತ್ತಿರುವ ರಸಗೊಬ್ಬರಗಳ ಪ್ರತಿ ಚೀಲದ ಮೇಲೆ ರಸಗೊಬ್ಬರದ ಪೂರ್ಣ ಬೆಲೆ ಸರ್ಕಾರದ ರಿಯಾಯಿತಿ ಮತ್ತು ನಿವ್ವಳ ಬೆಲೆಯನ್ನು ನಮೂದಿಸಲಾಗಿರುತ್ತದೆ.

ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಯಲ್ಲಿ ಜುಲೈ ಅಂತ್ಯದವರೆಗೆ

206412 ರೈತರು 22176 ಟನ್ ರಸಗೊಬ್ಬರಗಳನ್ನು ಮತ್ತು ಕರ್ನಾಟಕ ರಸಗೊಬ್ಬರ ರಿಯಾಯಿತಿ ಬೆಲೆ ಯೋಜನೆಯಲ್ಲಿ 1,55,066 ಟನ್ ರಸಗೊಬ್ಬರಗಳನ್ನು ವಿತರಿಸಲಾಗಿದೆ.

ವಿಷಯ : – ರಸಗೊಬ್ಬರದ ಸಹಾಯಧನದ ಅಸಮರ್ಪಕ ವಿತರಣೆ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 125(638)

ಶ್ರೀ ಪಿ.ಜಿ.ಆರ್ ಸಿಂಧ್ಯ (ಕನಕಪುರ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?.

ಅ) ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ರೈತರಿಗೆ ಗೊಬ್ಬರದ ಮೇಲೆ ಕೊಟ್ಟಿರುವ ಸಹಾಯಧನ ಎಷ್ಟು?(ಸಬ್ಸಿಡಿ ರೂಪದಲ್ಲಿ)

ಆ)ಇದರಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಹಣವೆಷ್ಟು?

ಇ) ಈ ಹಣದ ವಿತರಣೆಯು ಸರಿಯಾಗಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ರಸಗೊಬ್ಬರಗಳ ಸಹಾಯಧನದ ಎರಡು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ದಿನಾಂಕ 1-4-93ರಿಂದ ಅನುಷ್ಠಾನಗೊಳಿಸಿರುವ ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಗೆ 27.90 ಕೋಟಿ ರೂಪಾಯಿಗಳನ್ನು ಮತ್ತು ದಿನಾಂಕ 1-7-93ರಿಂದ ಅನುಷ್ಠಾನಗೊಳಿಸಿರುವ ಕರ್ನಾಟಕ ರಸಗೊಬ್ಬರ ಬೆಲೆ ರಿಯಾಯಿತಿ ಯೋಜನೆಗೆ 41.723 ಕೋಟಿ ರೂಪಾಯಿಗಳ ಸಹಾಯಧನವನ್ನು ನೀಡಲಾಗಿದೆ.

ಈ ಎರಡೂ ಯೋಜನೆಗಳಿಗೆ ಪೂರ್ಣ ಸಹಾಯ ಧನವನ್ನು ಕೇಂದ್ರ ಸರ್ಕಾರವು ಭರಿಸಲಿದ್ದು ಈವರೆಗೆ ಸಣ್ಣ ಮತ್ತು ಅತಿಸಣ್ಣ ರೈತರ ವಿಶೇಷ ನೆರವು ಯೋಜನೆಗೆ 21.229 ಕೋಟಿ ರೂಪಾಯಿಗಳು ಮತ್ತು ಕರ್ನಾಟಕ ರಸಗೊಬ್ಬರ ರಿಯಾಯಿತಿ ಬೆಲೆ ಯೋಜನೆಯಡಿ 10.43 ಕೋಟಿ ರೂ.ಗಳ ನೆರವು ಕೇಂದ್ರ ಸರ್ಕಾರದಿಂದ ಬಂದಿರುತ್ತದೆ.

ಇಲ್ಲ

ಉದ್ಭವಿಸುವುದಿಲ್ಲ.

ವಿಷಯ : – ರಸಗೊಬ್ಬರಗಳಿಗೆ ಸಹಾಯಧನ ನೀಡುವ ಬಗ್ಗೆ .

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 137 (595)

ಶ್ರೀ ಜಿ. ರಾಜುಗೌಡ (ಹನೂರು)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ರಿಯಾಯಿತಿ ದರದಲ್ಲಿ ರಸಗೊಬ್ಬರಗಳನ್ನು ರೈತರಿಗೆ ಒದಗಿಸುವ ಸಲುವಾಗಿ ಕೇಂದ್ರ ಸರ್ಕಾರದವರು ಈ ವರ್ಷ ನಮ್ಮ ರಾಜ್ಯಕ್ಕೆ ನೀಡಿರುವ ಸಹಾಯ ಧನವೆಷ್ಟು?

ಆ) ಮುಕ್ತ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು ರೈತರಿಗೆ ಏಕರೂಪದ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಲು ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆಯೇ?

ಇ) ಕಳೆದ ವರ್ಷ ಒಂದು ಟನ್ ಡೈಅಮೋನಿಯಂ ಫಾಸ್ಫೇಟ್ ರಸಗೊಬ್ಬರದ ನಿಯಂತ್ರಿತ ಬೆಲೆ ಎಷ್ಟು ಇತ್ತು?